**ಇಂದು ದಿನಾಂಕ 17.04.2026 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**2.** ಗೋಪಾಲಪ್ಪನವರು ಕೊಟ್ಟ ವಂಶವೃಕ್ಷವನ್ನು ಹಾಜರು ಮಾಡಿದ್ದೀರ ಎಂದರೆ ಗೊತ್ತಿಲ್ಲ. ನಿಡಿ-2 ರಲ್ಲಿ ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳಿದ್ದೇವೆ ಎಂದರೆ ನಿಜ. ನಾವು ಖರೀದಿಸಿರುವ ಆಸ್ತಿಗಳು ವಾದಿ ಮತ್ತು 1 ರಿಂದ 11 ನೇ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ಖರೀದಿ ಮಾಡುವ ಸಮಯದಲ್ಲಿ ಊರಿನಲ್ಲಿ ಯಾರನ್ನಾದರು ವಿಚಾರಿಸಿದ್ದೀರ ಎಂದರೆ ಗೊತ್ತಿಲ್ಲ. ಖರೀದಿ ಮಾಡುವ ಸಮಯದಲ್ಲಿ ಯಾರು ಯಾರಿಗೆ ಮಾತು-ಕತೆ ಆಗಿತ್ತು ಎಂದು ಗೊತ್ತಿಲ್ಲ. ಐಟಂ ನಂ.2 ಮತ್ತು 3 ಆಸ್ತಿಗಳ ಮೇಲೆ ಸಾಲ ಇತ್ತು. ಯಾವ ವರ್ಷದಲ್ಲಿ ಸಾಲ ಇತ್ತು ಎಂದು ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ಬರೆಸಿದ್ದೀರ ಎಂದರೆ ಇಲ್ಲ. ಪ್ರಮಾಣ ಪತ್ರದ ಅಂಶಗಳನ್ನು ನಾನು ಮತ್ತು 12 ನೇ ಪ್ರತಿವಾದಿ ಹೇಳಿ ಬರೆಸಿದ್ದೇವೆ. ಪ್ರಮಾಣ ಪತ್ರವನ್ನು ದೇವನಹಳ್ಳಿಯಲ್ಲಿ ನೋಟರಿ ಮಾಡಿಸಿದ್ದೇವೆ. ನಾನು ಮತ್ತು ನನ್ನ ಸ್ನೇಹಿತರು ಸಹಿ ಮಾಡಿದ್ದೇವೆ. ನನ್ನ ಸ್ನೇಹಿತರು ಸಾಕ್ಷಿ ಹೇಳಲು ತೊಂದರೆ ಇತ್ತ ಎಂದರೆ ಅವರು ಬ್ಯೂಸಿನೆಸ್ ಮಾನ್ ಆದ ಕಾರಣ ಅವರು ಬರಲು ಆಗುವುದಿಲ್ಲ ಆದ ಕಾರಣ ಪ್ರಮಾಣ ಪತ್ರ ಕೊಟ್ಟಿದ್ದಾರೆ. ನಾನು ಹಾಜರು ಮಾಡಿರುವ ಪಹಣಿಗಳಲ್ಲಿ 1988-89 ರ ಆಧಾರ ನಮೂದಿಲ್ಲ 2013 ರ ಆಧಾರ ನಮೂದಿಲ್ಲ ಎಂದರೆ 2014-15 ರಲ್ಲಿ ಇನ್ನೊಂದು ಆಧಾರ ಬರುತ್ತದೆ ಎನ್ನುತ್ತಾರೆ. ಸಾಲ ಮಾಡಿರುವ ದಾಖಲೆಯನ್ನು ಹಾಜರು ಮಾಡುತ್ತೇನೆ. ನಿಡಿ-2 ರಲ್ಲಿ ಸಾಲದ ಬಗ್ಗೆ ಯಾವುದೇ ನಮೂದಿಲ್ಲದಿದ್ದರೂ ನಾನೇ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರಾಟ ಮಾಡುವಾಗ ನರಸಮ್ಮ ಬಂದಿರಲಿಲ್ಲ. ನರಸಮ್ಮನ ಬಗ್ಗೆ ವಿಚಾರ ಮಾಡಲಿಲ್ಲ. 2024 ರಲ್ಲಿ ಗೋಪಾಲಪ್ಪನವರು ಮೃತರಾಗಿದ್ದಾರೆ ಎಂದರೆ ಗೊತ್ತಿಲ್ಲ. ಅವರು ಮೃತರಾಗಿರುವ ವಿಚಾರ ಗೊತ್ತಿದ್ದರೂ ಇಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಆಸ್ತಿ ಒಟ್ಟು ಕುಟುಂಬದ ಆಸ್ತಿಯಾಗಿದ್ದರೂ ವಾದಿಗಳಿಗೆ ಮೋಸ ಮಾಡಲು ನಾವು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಮಾಡುವ ಮೊದಲು ಪೇಪರ್ ಪ್ರಕಟಣೆಯನ್ನು ಕೊಟ್ಟಿದ್ದೀರ ಎಂದರೆ ಗೊತ್ತಿಲ್ಲ.

ನಾನು ಖರೀದಿ ಮಾಡಿರುವ ಎರಡು ಆಸ್ತಿಗಳ ಬಗ್ಗೆ ಗೊತ್ತಿಲ್ಲದಿದ್ದರೂ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 11 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ಇರುವ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ.2 ಮತ್ತು 3 ಆಸ್ತಿಗಳನ್ನು ಕಾನೂನು ವಿರುದ್ಧವಾಗಿ ನಾವು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ಎರಡು ಆಸ್ತಿಗಳಲ್ಲಿ ವಾದಿಗಳಿಗೂ ಭಾಗ ಇದೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**